# ಬಿನ್ನಹಕೆ ಬಾಯಿಲ್ಲವಯ್ಯಾ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi. Here, the wordings are similar to Ref. 2. But, few differences are there which are not considered here.
4. **Note:** The lyrics given in book mentioned in Ref. 2 (given without highlights) are almost similar to that of the singer. But the lyrics are different in book in Ref. 1 above. They are given separately in green highlights.

ರಾಗ: ಕಾಂಬೋಧಿ ತಾಳ: ಝಂಪೆ

| | |
|---|---|
| ಬಿನ್ನಹಕೆ ಬಾಯಿಲ್ಲವಯ್ಯಾ | ಬಿನ್ನಹಕೆ ಬಾಯಿಲ್ಲ ಎನಗೆ ಅದರಿಂದ |
| ಅನಂತ ಅಪರಾಧ ಎನ್ನಲ್ಲಿ ಇರಲಾಗಿ ‖ ಪ ‖ | ನಿನ್ನ ಮರೆದೆನೊ ಸ್ವಾಮಿ ಎನ್ನ ಕಾಯಯ್ಯ |
| | |
| ಅಸುರಾರಿ ನಿನ್ನ ಮರೆತೆನೊ ಕಾಯೊ ಹರಿಯೇ ‖ ಅಪ ‖ | |
| | |
| ಶಿಶು ಮೋಹ ಸತಿ ಮೋಹ ಜನನಿ ಜನಕರ ಮೋಹ | ಅನ್ನ ಮದ ಅರ್ಥ ಮದ ಅಖಿಳ ವೈಭವದ ಮದ |
| ರಸಿಕ ಭ್ರಾಂತಿಯ ಮೋಹ ರಾಜ ಮನ್ನಣೆ ಮೋಹ | ಮುನ್ನ ಪ್ರಾಯದ ಮದವು ರೂಪ ಮದವು |
| ಪಶು ಮೋಹ ಭೂ ಮೋಹ ಬಂಧು ವರ್ಗದ ಮೋಹ | ತನ್ನ ಸತ್ವದ ಮದ ಧರಿತ್ರಿ ವಶವಾದ ಮದ |
| ಹಸನುಳ್ಳ ಆಭರಣಗಳ ಮೋಹದಿಂದ ‖ ೧ ‖ | ಇನ್ನು ಎನಗಿದಿರಿಲ್ಲವೆಂಬ ಮದದಿ |
| | |
| ಅನ್ನ ಮದ ಅರ್ಥ ಮದ ಅಖಿಳ ವೈಭವದ ಮದ | ಶಶಿವದನೆಯರ ಮೋಹ ಜನನಿ ಜನಕರ ಮೋಹ |
| ಮುನ್ನ ಪ್ರಾಯದ ಮದವು ರೂಪ ಮದವು | ರಸಿಕ ಭ್ರಾಂತಿಯ ಮೋಹ ರಾಜ ಮನ್ನಣೆಯ ಮೋಹ |
| ತನ್ನ ಸತ್ವದ ಮದ ಧಾತ್ರಿ ವಶವಾದ ಮದ | ಪಶು ಮೋಹ ಶಿಶು ಮೋಹ ಬಂಧು ವರ್ಗದ ಮೋಹ |
| ಇನ್ನು ತನಗೆದುರಿಲ್ಲವೆಂತೆಂಬ ಮದದಿಂದ ‖ ೨ ‖ | ಹಸನುಳ್ಳ ವಸ್ತ್ರ ಆಭರಣಗಳ ಮದದಿ |
| | |
| ಇಷ್ಟು ದೊರಕಿದರೆ ಮತ್ತಿಷ್ಟು ಬೇಕೆಂಬಾಸೆ | ಇಷ್ಟು ದೊರಕಿದರೆ ಮತ್ತಿಷ್ಟು ಬೇಕೆಂಬಾಸೆ |
| ಅಷ್ಟು ದೊರಕಿದರು ಮತ್ತಷ್ಟರಾಸೆ | ಅಷ್ಟು ದೊರಕಿದರೆ ಮತ್ತಷ್ಟರಾಸೆ |
| ಕಷ್ಟ ಬೇಡೆಂಬಾಸೆ ಕಡು ಸುಖವ ಕಾಂಬಾಸೆ | ಕಷ್ಟ ಜೀವನದಾಸೆ ಕಾಣಾಚಿಕೊಂಬಾಸೆ |
| ನಷ್ಟ ಜೀವನದಾಸೆ ಪುರಂದರ ವಿಠಲ ‖ ೩ ‖ | ನಷ್ಟ ಜೀವನ ಬಿಡಿಸೊ ಪುರಂದರ ವಿಠಲ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಮೋಹ** – ಮನಸ್ಸನ್ನು ವಶಮಾಡಿಕೊಳ್ಳುವ ಪ್ರವೃತ್ತಿ; ಅತಿಯಾದ ಪ್ರೀತಿ.

**ಮದ** = ಸೊಕ್ಕು

**ರಸಿಕ ಭ್ರಾಂತಿ** – ತಾನು ರಸಿಕನೆಂದೂ, ಸುಖವನ್ನು ಅನುಭವಿಸುವವನೆಂದೂ ತಪ್ಪಾಗಿ ತಿಳಿಯುವುದು.

**ಅನ್ನ ಮದ...** – ಇಲ್ಲಿ ಅನ್ನ ಮದ, ಅರ್ಥ ಮದ, ಅಧಿಕಾರ ಮದ, ಯೌವನ ಮದ, ರೂಪ ಮದ, ಕುಲ ಮದ, ಐಶ್ವರ್ಯ ಮದ, ಬಲ ಮದ ಎಂಬ ಅಷ್ಟ ಮದಗಳನ್ನು ಹೇಳಿದೆ.

**ಕಡುಸುಖ** – ಹೆಚ್ಚಾದ ಸುಖ.

**ನಷ್ಟ ಜೀವನದಾಸೆ** – ಹಿಂದೆ ಸಂದ ಬದುಕು ಮತ್ತೆ ಬರಲಿ (ಎಂದರೆ ಮುಪ್ಪಡರೆದೆ ಇರಲಿ ಎಂಬ ಬಯಕೆ).

**ಹಸನುಳ್ಳ** = ಬೆಲೆಯುಳ್ಳ

**ಕಾಣಾಚಿ** = ನಾಣಾಶಿ, ದ್ರುವ್ಯ

**Classification:** Keerthane
**Ankita:** purandara vittala
**Location:** NA
**Category:** Binnaha
**Group Words:** binnaha, bayi, anna, rokka, bhumi, preeti, tayi, raja, tande, prani, bandhu, vastra, abharana, asura, Ananta, Krishna, sati, garva
**Pravachana:** NA
**Explanation:** NA